

ಕೋಟೆ ಒಳ ದ್ವಾರ, ಮಧ್ಯ (ಕಳಚಿಬಿದ್ದಿದೆ) ದ್ವಾರ ಮತ್ತು ಹೊರ ದ್ವಾರ.



ಕೋಟೆಯ ನಕಾಶೆಯಂತೆ ಕಾಣುವ ಒಂಬತ್ತು ಮೂಲೆಯ ನಕ್ಷತ್ರಾಕಾರ ರಚನೆ.



ಮದ್ದಿನ ಮನೆ

ಒಪ್ಪಂದದಿಂದ ಒಂದು ರೀತಿಯಲ್ಲಿ ಟಿಪ್ಪುವಿನ ಘನತೆ ಹೆಚ್ಚಾಗಿತ್ತು. ಆದರೆ ಇಂದಲ್ಲ ನಾಳೆ ಬ್ರಿಟಿಷರು ಸೇಡು ತೀರಿಸಿಕೊಳ್ಳಲು ಹವಣಿಸುತ್ತಾರೆಂಬ ಅರಿವೂ ಇತ್ತು.

ಬ್ರಿಟಿಷರು ಮಂಗಳೂರಿನಿಂದ ಈ ಪಶ್ಚಿಮ ಘಟ್ಟ ಶ್ರೇಣಿಯ ಕಣಿವೆ ಮಾರ್ಗ ದಾಟಿಯೇ ಬಯಲುನಾಡಿಗೆ ಬರುವ ಅವಕಾಶ ಹೆಚ್ಚಿತ್ತು. ಮಂಗಳೂರಿನಿಂದ 136 ಕಿ.ಮೀ.ದೂರದಲ್ಲಿ ಈ ಪ್ರದೇಶವಿದೆ. ಆದ್ದರಿಂದಲೇ ಬ್ರಿಟಿಷರನ್ನು ಶ್ರೀರಂಗಪಟ್ಟಣದ ಕಡೆಗೆ ಬಾರದ ಹಾಗೆ ತಡೆಗಟ್ಟುವ ಉದ್ದೇಶದಿಂದ ದೋಣಿ ಗುಡ್ಡದ ಮೇಲೆ ಕೋಟೆ ನಿರ್ಮಿಸಲು ಟಿಪ್ಪು ನಿರ್ಧರಿಸಿದ್ದು. ಹಾಗೆ 1792ರಲ್ಲಿ ಕೋಟೆ ನಿರ್ಮಾಣವಾಯಿತು.

ಒಮ್ಮೆ ಈ ಕೋಟೆಯನ್ನು ನೋಡಲು ಟಿಪ್ಪು ಬಂದಿದ್ದಾಗ, ಇಲ್ಲಿ ಸುತ್ತುವರಿದಿದ್ದ ಮಂಜು ಮತ್ತು ಸುಂದರ ವಾತಾವರಣವನ್ನು ನೋಡಿ ಈ ಪ್ರದೇಶವನ್ನು ಮಂಜರಾಬಾದ್ (ಸುಂದರ ಪ್ರದೇಶ) ಎಂದು ಕರೆದನಂತೆ. ಅಂದಿನಿಂದ ಇದಕ್ಕೆ ಮಂಜರಾಬಾದ್ ಎಂದೇ ಹೆಸರು ಬಂದಿದೆ.

ನಾಲ್ಕನೇ ಆಂಗ್ಲೋ-ಮೈಸೂರು ಕದನದಲ್ಲಿ ಟಿಪ್ಪು ಮರಣ ಹೊಂದಿದ ಮೇಲೆ ಈ ಪ್ರದೇಶ ಬ್ರಿಟಿಷರ ಆಶ್ರಿತ ಸಂಸ್ಥಾನವಾಯಿತು. 19ನೇ ಶತಮಾನದ ಪ್ರಾರಂಭದಲ್ಲಿ ಮಂಜರಾಬಾದ್ ಫೌಜ್‌ದಾರ್ ಆಡಳಿತ ವಿಭಾಗವಾಗಿತ್ತು. 1832ರಲ್ಲಿ ಮಂಜರಾಬಾದ್ ಅಷ್ಟ ಗ್ರಾಮ ಸಬ್ ಡಿವಿಷನ್‌ಗೆ ಸೇರಿತ್ತು. 1882ರ ವೇಳೆಗೆ ಮಂಜರಾಬಾದ್ ತಾಲ್ಲೂಕು ಕೇಂದ್ರವಾಯಿತು. ತಾಲ್ಲೂಕು ಕೇಂದ್ರ ಸಕಲೇಶಪುರಕ್ಕೆ ಸ್ಥಳಾಂತರಗೊಂಡಿದ್ದಾಗಲೂ ಆರಂಭದ ದಿನಗಳಲ್ಲಿ ಮಂಜರಾಬಾದ್ ತಾಲ್ಲೂಕು ಎಂದೇ ಕರೆಯಲಾಗಿತ್ತು. ಆದರೆ, ಈಗ ಮಂಜರಾಬಾದ್ ಕೋಟೆ ಸ್ಥಳೀಯರಿಗೆ ಗೊತ್ತಿದೆಯೇ ಹೊರತು, ದೇಶ ವಿದೇಶೀ ಪ್ರವಾಸಿಗರಿಗೆ ಅಪರಿಚಿತವಾಗಿಯೇ ಉಳಿದಿದೆ.

ಭಾರತೀಯ ಪುರಾತತ್ವ ಇಲಾಖೆಗೆ ಸೇರಿರುವ ಈ ಕೋಟೆಗೆ ಹೋಗಲು ಹೆದ್ದಾರಿಯಲ್ಲೇ ಮಾರ್ಗ ಫಲಕವನ್ನು ಹಾಕಿ ಕಾಲು ದಾರಿಗೆ ಕಾಯಕಲ್ಪ ಮಾಡಬೇಕು. ಆಗ ಹಾಸನ–ಮಂಗಳೂರು ಹೆದ್ದಾರಿಯಲ್ಲಿ ಸಂಚರಿಸುವ ಪ್ರವಾಸಿಗರನ್ನು ಈ ಕೋಟೆಯೆಡೆಗೆ ಆಕರ್ಷಿಸಬಹುದು.